# ಯಮನೆಲ್ಲೊ ಕಾಣೆನೆಂದು ಹೇಳಬೇಡ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** The wordings mainly are as per book in Ref. 1 and are given without highlights. The wordings in Ref. 2 (differences with respect to Ref. 1 are marked in green highlights) and that of the singer are matching.
4. **Note:** The Ankita is different in both the books. We have considered book in Ref.1 as standard and taken that Ankita for listing.

ರಾಗ ಶಂಕರಾಭರಣ ತಾಳ ಆದಿ

ಯಮನೆಲ್ಲೊ ಕಾಣೆನೆಂದು ಹೇಳಬೇಡ
ಯಮನೆ ಶ್ರೀ ರಾಮನು ಸಂದೇಹ ಬೇಡ ॥ ಪ ॥

ನಂಬಿದ ವಿಭೀಷಣಗೆ ರಾಮನಾದ
ನಂಬದಿದ್ದ ರಾವಣಗೆ (ಯಮನಾದ) (ಯಮನೇ ಆದ) ॥ 1 ॥

ನಂಬಿದ ಅರ್ಜುನನಿಗೆ (ಭೃತ್ಯನಾದ) (ಬಂಟನಾದ)
ನಂಬದಿದ್ದ (ದುರ್ಯೋಧನನಿಗೆ ಮೃತ್ಯುವಾದ) (ಕೌರವನಿಗೆ ಕಂಟಕನಾದ) ॥ 2 ॥

ನಂಬಿದ ಪ್ರಹ್ಲಾದನಿಗೆ ಹರಿಯಾದ
ನಂಬದಿದ್ದ ಹಿರಣ್ಯಕನಿಗೆ ಅರಿಯಾದ ॥ 3 ॥

ನಂಬಿದ ಉಗ್ರಸೇನಗೆ ಮಿತ್ರನಾದ
ನಂಬದಿದ್ದ ಕಂಸನಿಗೆ ಶತ್ರುವಾದ ॥ 4 ॥

(ನಂಬಿದವರ ಸಲಹುವ ನಮ್ಮ ದೊರೆಯು
ಅಂಬುಜಾಕ್ಷ ಪುರಂದರ ವಿಠ್ಠಲ ಹರಿಯು) ॥ 5 ॥
(ನಂಬಿಕೊಳ್ಳಿ ಬೇಗ ಶ್ರೀ ಕೃಷ್ಣ ದೇವನ

ಕಂಬು ಚಕ್ರಧಾರಿ ಪುರಂದರ ವಿಠಲನ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಯಮಧರ್ಮನಿಗೆ ಅಂತರ್ಯಾಮಿಯಾಗಿ ನಿಂತು ಯಮವಾಚ್ಯನಾಗಿ ಪಾಪಿಗಳಿಗೆ ಶಿಕ್ಷೆ ಕೊಡುವ ಪರಮಾತ್ಮನನ್ನು ಕುರಿತು ಈ ಹಾಡಿನಲ್ಲಿ ದಾಸರು ವಿವರಣೆ ಮಾಡಿದ್ದಾರೆ.

**ಹಿರಣ್ಯಕ** – ಹಿರಣ್ಯಕಶಿಪು.

**ಉಗ್ರಸೇನ** – ಮಧುರೆಯ ರಾಜನಾಗಿದ್ದವನು; ಕಂಸನ ತಂದೆ. ದುರಾಚಾರಿಯಾದ ಕಂಸನು ರಾಜನಾಗಬೇಕೆಂಬ ಆಸೆಯಿಂದ ತಂದೆಯನ್ನೇ ಸೆರೆಯಲ್ಲಿರಿಸಿ, ತಾನು ಆಡಳಿತ ನಡೆಸತೊಡಗಿದೆ. ಉಗ್ರಸೇನನ ಸೋದರ ದೇವಕನೆಂಬುವನ ಮಗಳೇ ದೇವಕಿ, ಕೃಷ್ಣನ ತಾಯಿ. ಆಹುಕನೆಂಬ ಚಂದ್ರವಂಶದ ಅರಸನ ಮಕ್ಕಳು ದೇವಕ, ಉಗ್ರಸೇನರು

**ಕಂಬು** – ಶಂಖ.

**Classification:** Keerthane
**Ankita:** purandara vittala
**Location:** NA
**Category:** Bhakti
**Group Words:** yama, rama, Vibhishana, ravana, pandava, kaurava, shatru, prahallada, krishna, asura, kamsa, chakra
**Pravachana:** NA
**Explanation:** NA